
ಗ್ಯಾಸ್ ಲೈಟಿನ ಬೆಳಕಲ್ಲಿ ಝುಗಝುಗ ಹೊಳೆಯುತ್ತಿದ್ದರು. 'ಸರಿ ನೀವು ಸಾಯಲು ಯಾಕೆ ಹೊರಟಿದ್ದಿರಿ? ಎಂದು ಒಂದು ಇರುಳು ಕೇಳಿದ್ದೆ. ಅವರು ಆ ಕಥೆಯನ್ನು ಹೇಳಿದ್ದರು.

ಹಾಗೆ ನೋಡಿದರೆ ಕಾಲು ಶತಮಾನದ ಹಿಂದೆ ನದಿಗೆ ಹಾರಿ ಸಾಯಲು ತೀರ್ಮಾನಿಸಿದ್ದ ಈ ಮಾಧವನ್ ನಾಯರ್ ಒಬ್ಬ ಸಾಮಾಜಿಕ ಕಾರ್ಯಕರ್ತ ಮತ್ತು ಸುಭಾಶ್ ಚಂದ್ರ ಬೋಸರ ಕಠೋರವಾದ ಅಭಿಮಾನಿ. ಈ ಲೋಕದಲ್ಲಿ ಸ್ವಾರ್ಥವಿಲ್ಲದೆ ಒಬ್ಬಾತ ಬದುಕಿದ್ದರೆ ಅದು ಸುಭಾಶ್ ಚಂದ್ರ ಬೋಸರು ಮಾತ್ರ ಎಂಬುದು ಅವರು ಕಂಡುಕೊಂಡ ಸತ್ಯ. ಕೇರಳದ ಆ ಪಟ್ಟಣದಲ್ಲಿ ಬೋಸರ ಹೆಸರಿನ ಕೂಲಿ ಕಾರ್ಮಿಕರ ಹೆಸರಿನ ಸಂಘವೊಂದನ್ನು ಮಾಡಿಕೊಂಡು ಬಡವರಿಗೆ ನೆರವಾಗುವುದು, ಅವರಿಗಾಗಿ ಮುಷ್ಕರಗಳನ್ನೂ ಜಾಥಾಗಳನ್ನೂ ನಡೆಸುವುದು, ಪೊಲೀಸು ಠಾಣೆಗಳ ಎದುರು ಧರಣಿ ಕೂರುವುದು ಇತ್ಯಾದಿಗಳನ್ನು ನಡೆಸುತ್ತಿದ್ದ ಈ ಮಾಧವನ್ ನಾಯರ್ ಆ ಊರಿನ ಬಡವರಾದ ಕೂಲಿಕಾರ್ಮಿಕರ ನಡುವೆ ಜನಪ್ರಿಯರೂ ಆಗಿದ್ದರು.



ಹಾಗೆ ತುಡಿಯುತ್ತಿದ್ದ ಮಾಧವನ್ ನಾಯರ್ ಹೃದಯದ ಕವಾಟ ಮುಚ್ಚಿದೆ ಎಂದು ತಿರುವನಂತಪುರ ಮೆಡಿಕಲ್ ಕಾಲೇಜಿನ ವೈದ್ಯರು ಹೇಳಿದ್ದರು. ಅವರು ಬಡವರೂ ಬೇಡ ತಾಯಿ ಹೆಂಡತಿ ಮಕ್ಕಳು ಯಾರೂ ಬೇಡವೇ ಬೇಡ ಎಂದು ತಮ್ಮ ಪುಟ್ಟದೊಂದು ಮನೆಯನ್ನು ನಲವತ್ತು ಸಾವಿರಕ್ಕೆ ಮಾರಿ ಆ ಹಣವನ್ನು ಆಪರೇಷನ್ನಿನ ಖರ್ಚಿಗಾಗಿ ಕೈಯಲ್ಲಿ ಹಿಡಕೊಂಡು ಬೆಂಗಳೂರಿನ ರೈಲು ಹತ್ತಿದ್ದರು. ಅಲ್ಲಿಂದ ಪುಟ್ಟಪರ್ತಿಗೆ ತಲುಪಿದಾಗ ಅಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ದೊಡ್ಡ ಕ್ಯೂ ಇರುವುದನ್ನು ಕಂಡು ಇನ್ನು ಬದುಕುವುದು ಬೇಡ ಎಂದು ಬೆಂಗಳೂರಿಗೆ ಹಿಂತಿರುಗಿ ಹೇಗೆ ಸಾಯುವುದೆಂದು ಯೋಚಿಸುತ್ತ ಅಲ್ಲಿನ ರೈಲು ನಿಲ್ದಾಣದಲ್ಲಿ ಕುಳಿತಿದ್ದರು.

ಮಾಧವನ್ ನಾಯರ್ 'ಇಕೋ ಇಲ್ಲಿ ನೋಡಿ' ಎಂದು ತಮ್ಮ ಶರಟಿನ ತೋಳು ಏರಿಸಿ ತೋಳಲ್ಲಿ ಬರೆದಿದ್ದ ಹಚ್ಚೆಯನ್ನು ತೋರಿಸಿದ್ದರು.

'ನನ್ನ ದೇಹವನ್ನು ಆಸ್ಪತ್ರೆಗೆ ದಾನ ಮಾಡಿ' ಎಂದು ಅಲ್ಲಿ ಆಂಗ್ಲ ಭಾಷೆಯಲ್ಲಿ ಬರೆಯಲಾಗಿತ್ತು

'ನಾನು ಕನ್ನಡ ನಾಡಲ್ಲೇ ಸಾಯುವುದು ಎಂದು ಮೊದಲೇ ಗೊತ್ತಿದ್ದರೆ ನಿಮ್ಮ ಕನ್ನಡದಲ್ಲೇ ಹಚ್ಚೆ ಬರೆಸಿಕೊಳ್ಳುತ್ತಿದ್ದೆ' ಎಂದು ಅವರು ಒಮ್ಮೆ ಹೇಳಿದ್ದರು. ಅಷ್ಟು ಹೊತ್ತಿಗೆ ಅವರ ಹೆಸರು ಮಲಯಾಳಿ ಮಾದೇವಣ್ಣ ಎಂದು ಬದಲಾಗಿತ್ತು.

ಮಾಧವನ್ ನಾಯರ್ ಮಲಯಾಳಿ ಮಾದೇವಣ್ಣ ಎಂಬುದಾಗಿ ಬದಲಾಗುವ ಹೊತ್ತಿಗೆ ಅವರಿಗೆ ಸೋಲಿಗರ ಶಿವಮ್ಮಳ ಜೊತೆ ಕೂಡಾಣಿಕೆಯೂ ಆಗಿತ್ತು. ಈ ಕೂಡಾಣಿಕೆಗೆ ಕಾರಣ ಇದೇ ಜೇನುಕುರುಬರ ಬಳ್ಳೆ ಅಣ್ಣಯ್ಯ. ದೇವರಾಜ ಮಾರ್ಕೆಟ್ಟಿನ ಮುಂಬಾಗದಲ್ಲಿ ರಾಜರಸ್ತೆಯಲ್ಲಿ ನಿಂಬೆಹಣ್ಣು, ಕೊತ್ತಂಬರಿ ಸೊಪ್ಪು, ಕಿತ್ತಳೆ, ಕೆಲವೊಮ್ಮೆ ಚಕ್ಕೋತ ಮಾರುತ್ತಿದ್ದ ಶಿವಮ್ಮ ಶಿವರಾತ್ರಿಯ ಹೊತ್ತಲ್ಲಿ ಕಾಡಲ್ಲಿ ಸಿಗುವ ಬಿಲ್ವಪತ್ರೆ, ಮುತ್ತುಗದ ಹೂ, ಪಾರಿಜಾತ, ಅಗಸೆ, ಸೀತಾಳೆ ಹೂಗಳನ್ನು ಚಿಕ್ಕಗಡಿಯಾರದ ಬಳಿ ಎದೆಮಟ್ಟಕ್ಕೆ ಹರಡಿಕೊಂಡು ಕೂತಿರುತ್ತಿದ್ದಳು. ಬಳ್ಳೆ ಅಣ್ಣಯ್ಯನೂ ಅವಳ ಬಳಿ ತನಗೂ ಅವಳಿಗೂ ಏನೂ ಆಗಬೇಕಾಗಿಯೇ ಇಲ್ಲವೆಂಬಂತೆ ಮುಗುಮ್ಮಾಗಿ ಕೂತಿರುತ್ತಿದ್ದ.

ಬಡವರ ಪಕ್ಷ, ಬೀದಿಬದಿ ವ್ಯಾಪಾರಿಗಳ ಸಂಘ. ಆದಿವಾಸಿಗಳ ಹಿತರಕ್ಷಣಾ ಸಮಿತಿ, ರೈತರ ಪಕ್ಷ, ಕನ್ನಡ ಹೋರಾಟಗಾರರ ಕೇಂದ್ರ ಹೀಗೆ ಎಲ್ಲ ಕಡೆಯೂ ಮೈಸೂರಿನಲ್ಲಿ ಮಲಯಾಳಿ ಮಾದೇವಣ್ಣನ ಹವಾ ನಡೆಯುತ್ತಿದ್ದ ಕಾಲ. ಎಲ್ಲಿ ಬೇಕಾದರೂ ಧರಣಿ ಮುಷ್ಕರ ಕೂರಲು ರೆಡಿಯಾಗುತ್ತಿದ್ದ ಮಾದೇವಣ್ಣ ಎರಡು ಮೂರು ಬಾರಿ ಜೇಲಿಗೂ ಹೋಗಿ ಬಂದಿದ್ದರು. ಬಳ್ಳೆ ಅಣ್ಣಯ್ಯನಿಗೂ ಸೋಲಿಗರ ಶಿವಮ್ಮನಿಗೂ ಏಕಪ್ರಕಾರವಾಗಿ ಹತ್ತಿರವಾಗಿದ್ದರು. ಅಣ್ಣಯ್ಯನೇ ಮುಂದೆ ನಿಂತು ಅವರಿಬ್ಬರ